ಬಾಲ ಕಾರ್ಮಿಕ ಪದ್ಧತಿ ತಡೆಗೆ ಸರ್ಕಾರದ ಕ್ರಮಗಳು

279 (422)

ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಪ್ರಶ್ನೆ

ಅ) ಮಕ್ಕಳನ್ನು ಕಾರ್ಮಿಕರನ್ನಾಗಿಸದೆ ಸಾಮಾಜಿಕ ಶಕ್ತಿಯಾಗಿ ರೂಪಿಸಲು ಸರ್ಕಾರ ಹಮ್ಮಿಕೊಂಡಿರುವ ಪರಿಣಾಮಕಾರಿ ಯೋಜನೆಗಳು ಯಾವುವು; ಸದರಿ ಯೋಜನೆಗಳು ಕಟ್ಟುನಿಟ್ಟಾಗಿ ಜಾರಿ ಗೊಳ್ಳುತ್ತಿವೆಯೇ;

What are the steps taken by the Government to formulate schemes to socially empower and to prevent child labour; are these schemes enforced strictly?

ಆ) ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರ ವಿರುದ್ಧ ಕ್ರಮ ಜರುಗಿಸಿದ ಪ್ರಕರಣಗಳೆಷ್ಟು; (ಕಳೆದ ಮೂರು ವರ್ಷಗಳ ವಿವರ ಒದಗಿಸುವುದು)

How Many cases have been filed against erring employers who have employed child labourers (past three years details to be provided)

ಇ) ಬಾಲ ಕಾರ್ಮಿಕ ಪದ್ಧತಿಯ ಸಂಪೂರ್ಣ ನಿರ್ಮೂಲನೆಗಾಗಿ ಪ್ರಸ್ತುತ ಜಾರಿಯಲ್ಲಿರುವ ಕಾನೂನು ವಿಧೇಯಕಗಳು ಯಾವುವು?

What are the legislations enacted to eradicate child labour system?

ಶ್ರೀ ಬಿ.ಎನ್.ಬಚ್ಚೇಗೌಡ (ಮಾನ್ಯ ಕಾರ್ಮಿಕ ಸಚಿವರು)

ಉತ್ತರ

ಅ) ಮಕ್ಕಳನ್ನು ಕಾರ್ಮಿಕರ ಪುನರ್ವಸತಿಗಾಗಿ ಸರ್ಕಾರ 2001ನೇ ಸಾಲಿನಲ್ಲಿ ವಿಶೇಷ ಕ್ರಿಯಾ ಯೋಜನೆಯನ್ನು ರೂಪಿಸಿದ್ದು, ಕ್ರಿಯಾ ಯೋಜನೆಯ ಉದ್ದೇಶಗಳು ಈ ಕೆಳಕಂಡಂತ್ತಿದೆ

1. ಅಪಾಯಕಾರಿ ಅಥವಾ ಅಪಾಯಕಾರಿಯಲ್ಲದ ಉದ್ದಿಮೆಗಳಲ್ಲಿ ಮಜೂರಿಗಾಗಿ ಅಥವಾ ಜೀವನೋಪಾಯಕ್ಕಾಗಿ ದುಡಿಯುವ 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಪ್ರತಿಬಂಧಿಸುವುದು.

2. 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ದುಡಿಯುವ ಮಕ್ಕಳನ್ನು ಗುರುತಿಸಿ ಮತ್ತು ಅವರನ್ನು ಬಿಡುಗಡೆಗೊಳಿಸುವುದು. ಬಿಡುಗಡೆಯಾದ ಬಾಲ ಕಾರ್ಮಿಕರಿಗೆ ಪುನರ್ವಸತಿಗೊಳಿಸುವುದು.

3. ಬಾಲ ಕಾರ್ಮಿಕರ ಕುಟುಂಬಗಳ ಪ್ರಯೋಜನಕ್ಕೆ ವಿವಿಧ ಅಭಿವೃದ್ಧಿ ಯೋಜನೆಗಳನ್ನು, ಬಡತನವನ್ನು ಕಡಿಮೆ ಮಾಡುವ ಕಾರ್ಯಕ್ರಮಗಳನ್ನು ಮತ್ತು ಸ್ವ–ಉದ್ಯೋಗ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.

4. ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡುವುದಕ್ಕೆ ಸಕಾರಾತ್ಮಕವಾದ ವಾತಾವರಣವನ್ನು ಕಲ್ಪಿಸಲು ಸಮುದಾಯ ಪಾಲ್ಗೊಳ್ಳುವಿಕೆಯ ಮೂಲಕ ಸಮೂಹಕ್ಕೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವುದು.

ಈ ಕೆಳಕಂಡ ಯೋಜನೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ.

- ಬಾಲಕಾರ್ಮಿಕರನ್ನು ಪತ್ತೆ ಹಚ್ಚಲು ನಿಯಮಿತವಾಗಿ ತಪಾಸಣೆಗಳನ್ನು ನಡೆಸಲಾಗುತ್ತಿರುವುದಲ್ಲದೆ, ಅನಿರೀಕ್ಷಿತ ದಾಳಿಗಳನ್ನೂ ಸಹ ನಡೆಸಲಾಗುತ್ತಿದೆ.
- ಕಾರ್ಮಿಕ ಇಲಾಖೆಯ ಅಧಿಕಾರಿಗಳಲ್ಲದೇ ಇತರೆ 11 ಇಲಾಖೆಗಳ ಸುಮಾರು 10,041 ಅಧಿಕಾರಿಗಳನ್ನು ಬಾಲ ಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ 1986ರ ಕಲಂ 17 ರಡಿ ನಿರೀಕ್ಷಕರನ್ನಾಗಿ ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರ ಕಲಂ 26(2) ರಡಿಯಲ್ಲಿ ಹೆಚ್ಚುವರಿ ನಿರೀಕ್ಷಕರನ್ನಾಗಿ ನೇಮಕ ಮಾಡಿ ತರಬೇತಿ ನೀಡಲಾಗಿದೆ.
- ಪತ್ತೆ ಹಚ್ಚಲಾದ ಬಾಲ ಕಾರ್ಮಿಕರಿಗೆ ಕೇಂದ್ರ ಸರ್ಕಾರದ ಎನ್‌ಸಿಎಲ್‌ಪಿ(NCLP) ಮತ್ತು ರಾಜ್ಯ ಸರ್ಕಾರದ ಎಸ್‌ಸಿಎಲ್‌ಪಿ (SCLP) ಕಾರ್ಯಕ್ರಮದಡಿ ಪುನರ್ವಸತಿ ಕಲ್ಪಿಸಲಾಗುತ್ತಿದೆ.
- ಅಪಾಯಕಾರಿ ಮತ್ತು ಅಪಾಯಕಾರಿಯಲ್ಲದ ಕ್ಷೇತ್ರದಲ್ಲಿ ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಂಡ ತಪ್ಪಿತಸ್ಥ ಮಾಲೀಕರ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆಗಳನ್ನು ಹೂಡಲಾಗುತ್ತಿದೆ.
- ಅಪಾಯಕಾರಿ ಕ್ಷೇತ್ರದಲ್ಲಿ ಮಕ್ಕಳನ್ನು ನೇಮಕ ಮಾಡಿಕೊಂಡ ತಪ್ಪಿತಸ್ಥ ಮಾಲೀಕರಿಂದ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಪ್ರಕಾರ ಪ್ರತಿ

ಪ್ರಕರಣದಲ್ಲಿ ರೂ.20,000/– ಗಳನ್ನು ಪರಿಹಾರವಾಗಿ ವಸೂಲಿ ಮಾಡಲಾಗುತ್ತಿದೆ.

- ವಸೂಲಿಯಾದ ಪರಿಹಾರವನ್ನು ಜಿಲ್ಲಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಬಾಲ ಕಾರ್ಮಿಕರ ಪುನರ್ವಸತಿ ಮತ್ತು ಕಲ್ಯಾಣನಿಧಿ ಎಂದು ಸ್ಥಾಪಿಸಲಾಗಿದೆ.
- ಬಾಲ ಕಾರ್ಮಿಕರು ದುಡಿಯುವ ಸಂದರ್ಭದಲ್ಲಿ ಕನಿಷ್ಟ ವೇತನ ಕಡಿಮೆ ಪಾವತಿ ಮಾಡುತ್ತಿರುವುದು ಕಂಡುಬಂದಲ್ಲಿ, ಕನಿಷ್ಟ ವೇತನ ಕಾಯ್ದೆ 1948 ರಡಿಯಲ್ಲಿ ಕ್ಲೈಮ್ ಅರ್ಜಿಗಳನ್ನು ಸಲ್ಲಿಸುವುದರ ಮೂಲಕ ಪರಿಹಾರವನ್ನು ಕಲ್ಪಿಸಲಾಗುತ್ತಿದೆ.
- ಸಾರ್ವಜನಿಕರು ಬಾಲ ಕಾರ್ಮಿಕರ ನೇಮಕಾತಿ ವಿರುದ್ಧ ದೂರನ್ನು ದಾಖಲಿಸಲು ಅನುಕೂಲವಾಗುವ ನಿಟ್ಟಿನಲ್ಲಿ ಕೇಂದ್ರ ಕಛೇರಿಯಲ್ಲಿ ನಿಯಂತ್ರಣ ಕೊಠಡಿಯನ್ನು ಸ್ಥಾಪಿಸಲಾಗಿದೆ.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯವರು ನಿರ್ವಹಿಸುತ್ತಿರುವ ಉಚಿತ ಮಕ್ಕಳ ಸಹಾಯವಾಣಿ ಸಂಖ್ಯೆ 1098 ಸೇವೆಯನ್ನು ಪಡೆದುಕೊಳ್ಳಲಾಗುತ್ತಿದೆ.
- ಇಲಾಖೆಯ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ದೂರನ್ನು ಸಹ ಸಾರ್ವಜನಿಕರು ದಾಖಲಿಸಬಹುದಾಗಿದೆ.
- ಬಾಲ ಕಾರ್ಮಿಕರನ್ನು ಕೆಲಸದಿಂದ ಬಿಡುಗಡೆಗೊಳಿಸಿದ ಮೇಲೆ ನಿಗಾವಹಿಸುವ ಸಲುವಾಗಿ ಅಂತರ್ಜಾಲ ಆಧಾರಿತ ಬಾಲ ಕಾರ್ಮಿಕರ ನಿಗಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಿ ಎಲ್ಲಾ ಜಿಲ್ಲೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ.

ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ದ್ವೈಮಾಸಿಕ "ಬಾಲವಾಣಿ" ಎಂಬ ಪತ್ರಿಕೆಯನ್ನು ಹೊರತರಲಾಗುತ್ತಿದೆ.

State Government has formulated an action plan in the year 2001 for re-habilitation of child labours with the following objectives:

1. To prevent children below the age of 14 years from working for wages or for a living both in hazardous and non-hazardous occupations.

2. To take steps to identify and release every child below the age of 14 years, if found working and totake all measures to rehabilitate the released child labour.
3. To implement various development schemes, poverty alleviation programmes and self-employment schemes to benefit the families of child labour.
4. To take up massive awareness generation programmes through community participation and to create a positive climate for elimination of child labour. The following steps are taken to check the employment of child labour;

    - Apart from regular inspections surprise checks are being conducted to identify the child labours

5. Apart from the officers of labour department, officers from 11 other departmental officers are notifiedas Inspectors under sec.17 of the Child Labour (Regulation and Prohibition) Act 1986 and as additional Inspectors under sec. 26(2) of Karnataka Shops and Commercial Establishments Act 1961 and Training programmes are given to the notified Inspectors.
6. Identified child labourers are being rehabilitated under NCLP Scheme of Central Government and SCLP Scheme of State Government.
7. Prosecutions are filed before the competent courts against the erring employers who employ child labourers both in hazardous and non-hazardous occupations and processes.
8. A compensation of Rs.20,000/- per child labour is being recovered from the offending employers who have employed children in hazardous occupations and processes as per Supreme Court Judgement.
9. The compensation recovered from the employers has been deposited in "Child Labour Re-habilitation cum Welfare Fund" established under the supervision of respective District Deputy Commissioners.

10. Claims are filed under Minimum Wages Act 1948 wherever child labours are paid less than the minimum wages fixed under the Act.
- Control room has been set up in the Head Office so as to enable the public to make complaints about child labour employment.
- Toll free number 1098 maintained by Women and Child Development is being utilized to receive complaints.
- Complaints can also be made online through the website of the Department.
- In order to keep track of the released child labours, Web-based Child Labour. Tracking System has been developed and established in all the 30 districts.
  A bimonthly magazine "Balavani" is published both in kannada and English.

ಆ) ಕಳೆದ 3 ವರ್ಷಗಳಲ್ಲಿ ಬಾಲ ಕಾರ್ಮಿಕರನ್ನು ನೇಮಿಸಿಕೊಂಡ ತಪ್ಪಿತಸ್ಥ ಮಾಲೀಕರ ವಿರುದ್ಧ ಕೈಗೊಂಡ ಕ್ರಮಗಳ ವಿವರಗಳು:

ವರ್ಷ	ಹೂಡಲಾದ ಮೊಕದ್ದಮೆಗಳ ಸಂಖ್ಯೆ	ಶಿಕ್ಷೆಗೊಳಗಾದ ಪ್ರಕರಣಗಳ ಸಂಖ್ಯೆ
2009–10	356	312
2010–11	479	112
2011–12	316	77

ವರ್ಷ	ವಿಧಿಸಲಾದ ದಂಡದ ಮೊತ್ತ	ಜೈಲು ಶಿಕ್ಷೆಗೊಳಗಾದ ಪ್ರಕರಣಗಳ ಸಂಖ್ಯೆ
2009–10	1304150	2
2010–11	230000	2
2011–12	511390	1

Action taken against the erring employers in the past three years is as below:

Year	No.of cases filed	No.of convictions
2009–10	356	312

2010–11	479	112
2011–12	316	77

Year	Amt. of fine imposed in Rs.	No.of cases ended with imprisonment
2009–10	1304150	2
2010–11	230000	2
2011–12	511390	1

ಆ) ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆಗೊಳಿಸಲು ಈ ಕೆಳಕಂಡ ವಿಧೇಯಕಗಳು ಜಾರಿಯಲ್ಲಿರುತ್ತವೆ.

1. ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ 1986 ಇದು ಕೇಂದ್ರ ಸರ್ಕಾರದ ಶಾಸನವಾಗಿದ್ದು, ಈ ಕಾಯ್ದೆಯಡಿಯಲ್ಲಿ 18 ಅಪಾಯಕಾರಿ ವೃತ್ತಿ ಮತ್ತು 65 ಅಪಾಯಕಾರಿ ವಿಧಾನಗಳಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ನೇಮಕಾತಿಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುತ್ತದೆ. ಕೇಂದ್ರ ಸರ್ಕಾರ ಕಾಲಕಾಲಕ್ಕೆ ಸದರಿ ಕಾಯ್ದೆಗೆ ತಿದ್ದುಪಡಿಯನ್ನು ತರುತ್ತಿದೆ.

2. ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ 1961 ರಾಜ್ಯ ಸರ್ಕಾರದ ಕಾಯ್ದೆಯಾಗಿದ್ದು, ಇದರಡಿಯಲ್ಲಿ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ನೇಮಕಾತಿಯನ್ನು ನಿಷೇಧಿಸಲಾಗಿರುತ್ತದೆ.

The following Acts are in force to eradicate child labour system:

1. Under Child Labour (Regulation and Prohibition) Act 1986, employment of Child labour below 14 years is banned in 18 hazardous occupations and 65 hazardous processes. It is a Central Act and the Act is being amended from time to time.

2. Karnataka Shops and Commercial Establishments Act 1961 is a State enactment, prohibits the employment of children below the age of 14 years.